ಕಡೆ ಬೇಕು ಎಂದು ಅವರು ಹೇಳುತ್ತಿಲ್ಲ. ಯಾವುದಾದರೂ ಒಟ್ಟು ಗ್ರಾಮೀಣ ಪ್ರದೇಶದಲ್ಲಿ ಮಾಡಿ ಎಂದು ಹೇಳುತ್ತಿದ್ದಾರೆ. ಎರಡನೆಯದು ನಾನು ಎನು ಹೇಳಿದ್ದೇನೆಂದರೆ ಆಯವ್ಯಯದಲ್ಲಿ ಎಷ್ಟು ನಮೂದಿಸಲಾಗುತ್ತದೆ ಮತ್ತು ಆಮೇಲೆ ಡಾ॥ ನಂಜುಂಡಪ್ಪನವರ ವರದಿ ಪ್ರಕಾರ Industrial Area ಎಲ್ಲೆಲ್ಲಿ ಇದ್ದಾವೆ ಅದನ್ನು ನೋಡಿಕೊಂಡು ನಾವು ಕೊಡುತ್ತೇವೆ. ಈಗ 38 ಧಾರವಾಡ ಜಿಲ್ಲೆಯಲ್ಲಿ ಇದ್ದಾವೆ. ಅದರಲ್ಲಿ 20 ನಮ್ಮ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಇದ್ದಾವೆ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತಿದ್ದೇನೆ. ಅಂತಹ ಬಹಳ ಜರೂರು, ಗಾಂಭೀರ್ಯತೆ ಎಲ್ಲಿ ಇದೆ? ಬಡ ಮಕ್ಕಳು ಹೋಗಲಿಕ್ಕೆ ತೊಂದರೆ ಆಗುತ್ತದೆ? ಅದನ್ನು ನೀವು ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ. Additional budgetನಲ್ಲಿ ನೋಡಿಕೊಂಡು ಮಾನ್ಯ ಹಣಕಾಸು ಸಚಿವರ ಹತ್ತಿರ ಮಾತನಾಡಿ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡೋಣ.

ಅಧ್ಯಕ್ಷರು:– ಮಾನ್ಯ ಪಿ.ಸಿ.ಮೋಹನ್.

(ಮಾನ್ಯ ಸದಸ್ಯರ ಗೈರು ಹಾಜರಿ)

ಅಧ್ಯಕ್ಷರು:– ಮಾನ್ಯ ಶ್ರೀನಿವಾಸಗೌಡರ ಪ್ರಶ್ನೆ ವರ್ಗಾವಣೆ ಆಗಿದೆ.

207 (1409) ಶ್ರೀ ಪಾಟೀಲ್ ಡಿ.ಆರ್ :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ಮಂಜೂರು ಮಾಡಲಾಗಿರುವ ಅನುದಾನ ಎಷ್ಟು ಹಾಗೂ ಸೌಲಭ್ಯಗಳಾವುವು;

(ಮಹಾವಿದ್ಯಾಲಯವಾರು ವಿವರ ನೀಡುವುದು);

(ಆ) ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಬೋಧಕ ಸಿಬ್ಬಂದಿ ಎಷ್ಟು ಇರಬೇಕಾಗಿದ್ದಿತು ಎಷ್ಟು ಇದೆ (ವಿದ್ಯಾಲಯವಾರು ವಿವರ ನೀಡುವುದು);

(ಇ) ಬೋಧಕರ ಕೊರತೆಯನ್ನು ತುಂಬಲು ಸರ್ಕಾರರ ಕೈಗೊಳ್ಳಲಿರುವ ಕ್ರಮವೇನು;

(ಈ) ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿರುವ ಎಂ.ಜಿ.ಜಿ.ಎನ್ ಹಾಗೂ ಸ್ನಾತಕ್ಕೋತ್ತರ ಪ್ರವೇಶಾವಕಾಶ? ಎಷ್ಟು (ಮಹಾವಿದ್ಯಾಲಯವಾರು ವಿವರ ನೀಡುವುದು)

ಡಾ॥ ವಿ.ಎಸ್. ಆಚಾರ್ಯ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು)

(ಅ) ವರ್ಷ	ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ	ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
2004-05	1699.18	1014.67
2005-06	1973.03	1139.30
2006-07	2040.40	1297.15
ಈ ಕಾಲೇಜುಗಳಲ್ಲಿ ದೊರೆಯುತ್ತಿರುವ ಸೌಲಭ್ಯಗಳ ವಿವರಗಳನ್ನು ಅನುಬಂಧ 'ಅ'ರಲ್ಲಿ ಲಗತ್ತಿಸಲಾಗಿದೆ.		

ಆ)	ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ	ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
ಇರಬೇಕಾಗಿದ್ದ ಬೋಧಕ ಸಿಬ್ಬಂದಿ	422	312
ಹಾಲಿ ಇರುವ ಬೋಧಕ ಸಿಬ್ಬಂದಿ	268	148

(ಇ) ಈ ವೈದ್ಯಕೀಯ ಮಹಾವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿ ಮಾರ್ಪಾಟಾಗಿದ್ದು, ಕೊರತೆ ಇರುವ ಬೋಧಕ ಹುದ್ದೆಗಳನ್ನು ತುಂಬಲು ವಾಕ್-ಇನ್-ಇಂಟರ್‌ವ್ಯೂ ನಡೆಸಿದ್ದು ನೇಮಕಾತಿ ಪ್ರಕ್ರಿಯೆ ಮುಂದುವರೆದಿದೆ.

(ಈ) ಕೋರ್ಸುಗಳ ಹೆಸರು	ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ	ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
ಎಂ.ಬಿಬಿಎಸ್	150	100
ಸ್ನಾತಕೋತ್ತರ ಡಿಪ್ಲೊಮೋ	75	47
ಸ್ನಾತಕೋತ್ತರ ಡಿಗ್ರಿ	71	39
ಎಂಸಿಹೆಚ್ ಸೂಪರ್ ಸ್ಪೆಷಾಲಿಟಿ	04	-

ಅನುಬಂಧ

Facilities provided during last 3 years in Bangalore Medical College & Research Institute and attached teaching hospitals.

1. 2 CT Scanners Provided one by Government and one by RGUHS and installed one at Victoria Hospitals and one at Bowring and L.C. Hospital.

2. The BMCRI Alumni Association has constructed Digital Library with 60 computers and a state of art Seminar hall in BMCRI Campus at a cost of Rs. 4 crores.

3. The Infosys Foundation has constructed a Central Lab at Victoria Hospital campus with a cost of Rs.3 crores and the Govt. has provided equipments worth of Rs. 3 crores.

4. The Central Govt. sanctioned a Project for BMCRI upgradation (construction of Superspeciality block at Victoria Hospial & sophisticated

equipments to all the departments of the five attached teaching hospitals under PMSSY Scheme with Rs. 100 crores and the State Govt. Rs. 20 crores for construction of two tower block over the Centenary building and Trauma & Casuality block in Victoria Hospital premises.

5. The KPTCL block is coming up to house emergency and Trauma care facilities.

6. BDA has constructed and donated a building for emergency and Casuality at Bowring & LC. Hospital.

7. A New dissection hall and examination hall has been built up by the Govt. at BMCRI campus.

8. Rs. 1.28 crores was sanctioned by the Govt. for renovation of BMCRI during Golden Jubilce celebration.

9. OPD Block has come up at Vani Vilas Hospital.

ಅನುಬಂಧ–ಮೈಸೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ

1. ಕೋಬಾಲ್ಟ್ 60 ರೇಡಿಯೋಥೆರಪಿ.
2. ಸಿ.ಟಿ. ಸ್ಕ್ಯಾನ್.
3. 24 ಘಂಟೆಗಳ ಕೇಂದ್ರಿಯ ಪ್ರಯೋಗಾಲಯ
4. ಟೆಲಿಮೆಡಿಸನ್
5. ಡಯಾಬಿಟಿಕ್ ಕ್ಲಿನಿಕ್
6. ಸಿ–ಆರ್ಮ್
7. ಮ್ಯಾಮೊಗ್ರಾಂ
8. ಕ್ಷ–ಕಿರಣ ಯಂತ್ರಗಳ ಉನ್ನತೀಕರಣ
9. ಡಯಾಲಿಸಿಸ್ ಯಂತ್ರ ಸಂಖ್ಯೆ 02
10. ಎಕ್ಸರೇ ಮಷಿನ್ ಮೊಬೈಲ್.
11. ಆರ್ಥೋಸ್ಕೋಪ್ ಒಂದು ಸೆಟ್
12. ಫೈಬ್ರೋ ಆಪ್ಟಿಕಲ್ ಲೆರಿಂಜೋಸ್ಕೋಪ್
13. PHACO emulfiation unit.
14. ಓ.ಟಿ. ಟೇಬಲ್ ಸಂಖ್ಯೆ 02

ಶ್ರೀ ಡಿ.ಆರ್ ಪಾಟೀಲ್:– ಮಾನ್ಯ ಅಧ್ಯಕ್ಷರೇ, ಉತ್ತರದೊಳಗೆ ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿರುವ ಸ್ವಾಯತ್ತ ಸಂಸ್ಥೆಗಳ ಬಗ್ಗೆ ಯಾವುದೂ ಮಾಹಿತಿ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:– That is also Government College.

ಶ್ರೀ ಡಿ.ಆರ್. ಪಾಟೀಲ್: ಅವೂ Government Colleges. ಅದಕ್ಕೆ ದಯವಿಟ್ಟು ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿರುವ ಸ್ವಾಯತ್ತ ಸಂಸ್ಥೆಗಳ ಅಧೀನದಲ್ಲಿ ಕೆಲಸ ಮಾಡುತ್ತಿರುವ ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿರುವ ಸೌಲಭ್ಯಗಳು ಏನು? ಇಲ್ಲಿ ಇರಬೇಕಾದ ಬೋಧಕ ಸಿಬ್ಬಂದಿ ಎಷ್ಟು? ಈಗ ಎಷ್ಟು ಇದೆ? ಈ ಮಾಹಿತಿ ದಯಮಾಡಿ ಒದಗಿಸಿ. ಆಮೇಲೆ ಅನುದಾನದ ವಿಚಾರವನ್ನು ಸಹ ಹೇಳಿ.

ಡಾ॥ ವಿ.ಎಸ್. ಆಚಾರ್ಯ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು):– ತಾವು ಕಳೆದ ಮೂರು ವರ್ಷದ ಮಾಹಿತಿ ಕೇಳಿದಿರಿ. ಮೂರು ವರ್ಷದಿಂದ ಮೊನ್ನೆ ಜನವರಿಯವರೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಎಂದು ಇದ್ದಿದ್ದು ಬೆಂಗಳೂರು ಮತ್ತು ಮೈಸೂರು ಮಾತ್ರ. ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿನ ಕಾಲೇಜುಗಳು ಅವು Autonomus Collegesಗಳು. ಹಾಗಾಗಿ ಕೊಡಲಿಲ್ಲ.

ಶ್ರೀ ಬಸವರಾಜ ರಾಯ ರೆಡ್ಡಿ:– Autonomus ಅಂದರೆ ಅವು Government Colleges ಅಲ್ಲವಾ?

ಡಾ॥ ವಿ.ಎಸ್. ಆಚಾರ್ಯ:– Government Colleges ಹೌದು. ಆದರೆ. ನಮ್ಮ Nomenclature ಪ್ರಕಾರ Autonomus bodies, Government ಎಂದು ನೇರವಾಗಿ ಇದ್ದುದರಿಂದ, ಕಳೆದ ಮೂರು ವರ್ಷ ಎಂದು ಇದ್ದುದರಿಂದ, ಮೂರು ವರ್ಷದ ಮಾಹಿತಿ ಇರುವುದು ಇದು ಎರಡೇ ಎಂದು ನಾನು ಉತ್ತರ ಕೊಟ್ಟಿದ್ದೇನೆ. ಮಧ್ಯಾಹ್ನ ಮಾನ್ಯ ಸದಸ್ಯರು ನನಗೆ ಒಂದು ಚೀಟಿ ಕಳಿಸಿದರು. ಆಮೇಲೆ ನಾನು ಕೆಲವು information ತರಿಸಿದ್ದೇನೆ. ಅದಲ್ಲದೇ ಇವತ್ತು ಬಹಳ ವೇಳೆ ಆಯಿತು. ಬೇಕಿದ್ದರೆ ಮಾನ್ಯ ಪಾಟೀಲ್ ಅವರಿಗೆ ಪ್ರತಿಯೊಂದು ವಿವರವನ್ನೂ ಒದಗಿಸಿ ಕೊಡುತ್ತೇನೆ. ನಮಸ್ಕಾರ.

ಶ್ರೀ ಎಸ್.ಎಸ್. ಪಾಟೀಲ್:– ಈಗಾಗಲೇ ನಾನು ಒಂದು Un started ಪ್ರಶ್ನೆ ಹಾಕಿದ್ದೆ. ಈಗ ಅದು ಬಂದಿದೆ.

ಶ್ರೀ ಡಿ.ಆರ್. ಪಾಟೀಲ್:– ಈಗ ಇಲ್ಲವೇನು?

ಅಧ್ಯಕ್ಷರು:– ಅವರು ಉತ್ತರ ಹೇಳಲಿ.

ಶ್ರೀ ಡಿ.ಆರ್. ಪಾಟೀಲ್:– ಸಾರ್ ಈಗ ತಮ್ಮ ಹತ್ತಿರ ಎಷ್ಟು ಮಾಹಿತಿ ಇದೆ. ಅಷ್ಟು ಕೊಡಿ. ಉಳಿದಿದ್ದನ್ನು ನಾನು ಬಂದು ಕಲೆಕ್ಟ್ ಮಾಡುತ್ತೇನೆ.

ಶ್ರೀ ಬಸವರಾಜು ರಾಯ ರೆಡ್ಡಿ:– ಅವರು ಬಹಳ ಜಾಣರಾಗಿ ಉತ್ತರ ಕೊಡುತ್ತಾರೆ.

ಅಧ್ಯಕ್ಷರು:– ದಯಮಾಡಿ ಅವರು ಉತ್ತರ ಹೇಳಲಿ. ಅದಾದ ಮೇಲೆ ನಿಮ್ಮ supplementary.

ಡಾ॥ ವಿ.ಎಸ್. ಆಚಾರ್ಯ:– ಈಗ ಸಾಮಾನ್ಯ ಒಂದು ವೈದ್ಯಕೀಯ ಕಾಲೇಜಿಗೆ ಹೊಂದಿಕೊಂಡಿರುವಂತಹ ಆಸ್ಪತ್ರೆಯಲ್ಲಿ ಯಾವ್ಯಾವ ವಿಶೇಷ ಸೌಲಭ್ಯಗಳು ಇರಬೇಕು? ಅವೆಲ್ಲಾ ಸೌಲಭ್ಯಗಳು ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿ ಇವೆ. ನೀವು ಅವೆರಡರ ಬಗ್ಗೆ ವಿಶೇಷವಾಗಿ ಕೇಳಿದ್ದೀರಿ. Medicine, Surgery, obstetric Gynaecology ಒಟ್ಟಿಗೆ specialized ಅಂದರೆ ophthaimology E.N.T. ಇವೆಲ್ಲಾ schemes ಇವೆ. ಅದರ ಒಟ್ಟಿಗೆ cobalt ಮತ್ತು radio therapy Bellary ಯಲ್ಲಿದೆ, you will be pleased to know. ಅವರು ಬೆಂಗಳೂರಿಗೆ ಬರಬೇಕು ಎಂದಿಲ್ಲ. ಬಹುತೇಕ Oncology, Cancer patients ಗೆ ಇರುವಂತಹುದು ಇದೆ. CT Scan, ಹುಬ್ಬಳ್ಳಿಯಲ್ಲೂ ಇದೆ, ಬಳ್ಳಾರಿಯಲ್ಲೂ ಇದೆ. CT Scan, it is a diagnostic tool. ಆಮೇಲೆ 24 ಗಂಟೆಗಳ ಕಾಲ ಪ್ರಯೋಗಾಲಯ ಎರಡೂ ಕಡೆ ಇದೆ. Diabetic Clinic ಇದೆ, Diabetes ಇರುವವರಿಗೆ ಅದರ ಬಗ್ಗೆ ಬೇಕಾದಂತಹ ವ್ಯವಸ್ಥೆ ಇದೆ. ಸಿ–ಫಾರ್ಮ ಇದೆ. Mammogram ಹುಬ್ಬಳ್ಳಿಯಲ್ಲಿದೆ, ಬಳ್ಳಾರಿಯಲ್ಲೂ ಇದೆ. X-Ray Machines ಅನ್ನು up-grade ಮಾಡಿದ್ದೇವೆ. Dialysis ಯಂತ್ರ ಎರಡೂ ಕಡೆ ಇದೆ. ಆಮೇಲೆ ನಮ್ಮ phaco emulsifier ಕಣ್ಣಿಗೆ ಸಂಬಂಧಪಟ್ಟದ್ದು ಬಳ್ಳಾರಿಯಲ್ಲಿದೆ. ಇದಲ್ಲದೇ ಇನ್ನೊಂದು ವಿಚಾರ. ಅವರಿಗೆ ಬಹಳ ಸಂತೋಷ ಆಗಬಹುದು. ಬಹು ಕಾಲದಿಂದ ಅಂದರೆ ಈಗ 4 ವರ್ಷದಿಂದ ಬಜೆಟ್‌ನಲ್ಲಿ ಹೇಳಿದಂತಹ catalogue ಅನ್ನು ಹುಬ್ಬಳ್ಳಿಗೋಸ್ಕರ ನಾವು ಈಗಾಗಲೇ ಖರೀದಿಗೆ Order book ಮಾಡಿದ್ದೇವೆ. ಈಗ 4 ದಿವಸದ ಹಿಂದೆ ಆ ಆರ್ಡರ್ ಹೋಗಿದೆ. ನಾಡಿದ್ದು 6.9.07ರ ಮುಂಚೆ ಅದು ಅಲ್ಲಿ install ಆಗುವಂತಹ

ಎಲ್ಲಾ ವಿಶ್ವಾಸ ಇದೆ. ಆ ದಿವಸ 50 ವರ್ಷದ ಹಿಂದೆ ಹುಬ್ಬಳ್ಳಿ ಮೆಡಿಕಲ್ ಕಾಲೇಜು ಸ್ಥಾಪನೆ ಆದಂತಹ ದಿವಸ. ಇನ್ನು Staffನ ಬಗ್ಗೆ ನಿಮಗೆ ಮಾಹಿತಿ ಕೊಡಬೇಕು ಅಂದರೆ ಅಲ್ಲಿ ಈಗ ಪ್ರವೇಶ ಮಿತಿ 100 ಜನರಿಗೇ ಇದ್ದರೂ, ನಾವು ಹಿಂದೆ 200 ಜನ ವಿದ್ಯಾರ್ಥಿಗಳು ಇದ್ದಾಗ ಎಷ್ಟು ಇತ್ತು? ಅಷ್ಟು 333 ಜನ ನಮ್ಮ maximum staff capacity ಇರುವಂತಹುದು, ಅಷ್ಟೂ ಜನ ಅಂದರೆ 333 ಜನ ಅದರಲ್ಲಿ 52 ಜನ ನಮ್ಮ ಪ್ರೊಫೆಸರ್. 80 ಜನ Associate Professor, Assistant Professor/Lecturer ಎಂದು ಇದ್ದವರು 78 ಮತ್ತು 24 ಅಂದರೆ 102 ಸ್ಥಾನಗಳಲ್ಲಿ 102 ಸ್ಥಾನ. ಮತ್ತು Tutors, Junior level teachers ಒಟ್ಟು 99 ಜನ. ಹೀಗೆ 333 ಜನರೂ ಹುಬ್ಬಳ್ಳಿಯಲ್ಲಿದ್ದಾರೆ.

ಶ್ರೀ ಎನ್. ಧರ್ಮಸಿಂಗ್: ಮೂರು ವರ್ಷಗಳಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಹೇಳಬೇಕು.

ಶ್ರೀ ವಿ.ಎಸ್. ಆಚಾರ್ಯ:– ಕೊಡುತ್ತೇನೆ. 2006–07ನೇ ಸಾಲಿನಲ್ಲಿ ಹುಬ್ಬಳ್ಳಿಗೆ ಸುಮಾರು 33 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಬಾರಿ ತಮಗೆ ಗೊತ್ತಿದೆ. ಸುವರ್ಣ ಮಹೋತ್ಸವದ ಸಂಬಂಧ ದೊಡ್ಡ ಪ್ಯಾಕೇಜ್‌ನಲ್ಲಿ ನೀಡಲಾದ 20 ಕೋಟಿ ರೂಪಾಯಿಗಳಲ್ಲಿ, ನಾಲ್ಕು ತಿಂಗಳುಗಳಲ್ಲಿ 11 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಹಾಗಾಗಿ, ಆ 11 ಕೋಟಿ ಮತ್ತು ಅಲ್ಲಿಗೆ ಕೊಡುವಂತಹ ಸುಮಾರು 22 ಕೋಟಿ ರೂಪಾಯಿಗಳನ್ನು ಈಗ ಬಿಡುಗಡೆ ಮಾಡಿದ್ದೇವೆ, ಬಳ್ಳಾರಿಗೂ ಈ ಬಾರಿ ಅಲ್ಲಿ Dental College ಗೆಂದು 6 ಕೋಟಿ ರೂಪಾಯಿಗಳನ್ನು, ಕಾಲೇಜಿನ administrative building ನಿರ್ಮಿಸುವ ಸಲುವಾಗಿ 8 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ರೀತಿಯಾಗಿ ವಿಶೇಷ ಅನುದಾನವನ್ನು ಅಲ್ಲಿಗೂ ಕೊಟ್ಟಿದ್ದೇವೆ.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳ ಬಗ್ಗೆ.

(208) 1237 ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು):– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು;

(ಆ) ಗುತ್ತಿಗೆ ಆಧಾರದ ಮೇಲೆ ನೇಮಕವಾದ ವೈದ್ಯಾಧಿಕಾರಿಗಳಿಗೆ ಕೊಡುವ ಭತ್ಯೆ ಎಷ್ಟು;